ಈ ದಿನ ದಿನಾಂಕಃ 02-07-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ</u>**

ಈ ದಾವೆಯನ್ನು ನನ್ನ ತಾಯಿ ಹೂಡಿದ್ದು ಮಾಹಿತಿಯನ್ನೂ ಸಹ ನನ್ನ ತಾಯಿಯೇ ಕೊಟ್ಟಿರುತ್ತಾರೆ. ನನ್ನ ತಾಯಿಗೆ ವಯಸ್ಸಾದ ಕಾರಣ ನ್ಯಾಯಾಲಯಕ್ಕೆ ಬರಲು ಆಗುತ್ತಿಲ್ಲ. ನನ್ನ ತಾಯಿ ಈ ದಾವೆಯನ್ನು 5 ರಿಂದ 7 ಪ್ರತಿವಾದಿಗಳ ವಿರುದ್ದ ಹೂಡಿರುತ್ತಾರೆ. ಈ ದಾವೆಯನ್ನು ಘೋಷಣಾತ್ಮಕ ಪರಿಹಾರ ಕೋರಿ ಹೂಡಿರುತ್ತಾರೆ. ನನ್ನ ತಂದೆ ದಿಃ 09.06.2016 ರಂದು ಮೃತಪಟ್ಟಿರುತ್ತಾರೆ. ದಾವಾಸ್ತಿ ನನ್ನ ತಂದೆಗೆ ಸರ್ಕಾರದಿಂದ ಬಂದಿರುತ್ತದೆ. ಸದರಿ ಆಸ್ತಿ ಸಂಖ್ಯೆ.123. ಅದರ ವಿಸ್ತೀರ್ಣ ಪೂರ್ವ ಪಶ್ಚಿಮ 50 ಅಡಿ, ಉತ್ತರ ದಕ್ಷಿಣ 100 ಅಡಿ ಇದೆ. ನನ್ನ ತಂದೆಗೆ ಸದರಿ ಆಸ್ತಿ 1977 ರಲ್ಲಿ ಮಂಜೂರಾಗಿರುತ್ತದೆ. ಸದರಿ ಸಮಯಕ್ಕೆ ದಾವಾಸ್ತಿಯಲ್ಲಿ ನಾವೇ ಸ್ವಾಧೀನದಲ್ಲಿ ಇದ್ದೇವೆ . ನಾನು 1971 ರಲ್ಲಿ ಜನಿಸಿರುತ್ತೇನೆ. ನನ್ನ ತಂದೆ ದಾವಾಸ್ತಿ ಮಂಜೂರಾದ ಕುರಿತು ಗ್ರ್ಯಾಂಟ್ ಸರ್ಟಿಫಿಕೇಟ್ ಬಂದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆಯ ಜೊತೆಗೆ ದೊಡ್ಡ ಮುದುಕಪ್ಪ ಎನ್ನುವವರಿಗೆ ಮಂಜೂರಾಗಿರುತ್ತದೆ.

ಮುಂದುವರೆದ  ಪಾಟೀಸವಾಲಿಗೆ  ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.